# ಸಾವಿತ್ರಿಯ ವಿಗ್ರಹ



ದೇವಾಲಯಗಳ ತವರು ಒಡಿಶಾ, ಭಾರತದ ಆಗ್ನೇಯ ತೀರದಲ್ಲಿದೆ. ಇದು ದೇಶದ ಒಂಬತ್ತನೇ ದೊಡ್ಡ ರಾಜ್ಯ. ಪುರಿಯ ಜಗನ್ನಾಥ ಸೇರಿದಂತೆ ಸುಮಾರು 700 ಪ್ರಸಿದ್ಧ ದೇವಾಲಯಗಳನ್ನು ಹೊಂದಿರುವ ಒಡಿಶಾ ಪ್ರಮುಖ ಆರು ನದಿಗಳ ಭೌಗೋಳಿಕ ಕೊಡುಗೆಯಿಂದ ನಳನಳಿಸುತ್ತಿದೆ.

ನೆಲ, ಜಲ, ಭಾಷೆ, ಸಂಸ್ಕೃತಿಗಾಗಿ ದುಡಿದ ಮಹನಿಯರ ಪುತ್ಥಳಿಗಳನ್ನು ಸ್ಥಾಪಿಸಿದ್ದಿದೆ. ಕಲಾವಿದೆಯರು ಬದುಕಿರುವಾಗಲೇ ಅವರಿಗೆ ಆಲಯಗಳನ್ನು ಕಟ್ಟಿ ಸಮರ್ಪಿಸಿದ್ದಿದೆ. ಸಹಗಮನ, ಅನುಗಮನ ಮಾಡಿದ ಮಹಾಸತಿಕಲ್ಲುಗಳು, ಸಮಾಜಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರರ ಸ್ಮರಣೆಯ ವೀರಗಲ್ಲುಗಳು ಅಪರೂಪಕ್ಕೆ ದೇವಾಲಯಗಳನ್ನು ಚರಿತ್ರೆಯಲ್ಲಿ ನಿರ್ಮಿಸಿದ ಉದಾಹರಣೆಗಳಿವೆ.

ಸಾಕ್ಷಾತ್ ಮೃತ್ಯು ದೇವ ಯಮಧರ್ಮನೊಡನೆ ಹೋರಾಡಿ ತನ್ನ ಪತಿಯ ಪ್ರಾಣವನ್ನು ರಕ್ಷಿಸಿದ ಮಹಾನ್ ಮಹಿಳೆ ಸತ್ಯವಾನನ ಪತ್ನಿ ಸಾವಿತ್ರಿಯ ಹೋರಾಟ ಪುರಾಣ ಪ್ರಸಿದ್ಧ. ಸ್ತ್ರೀ ಕುಲದ ಆರಾಧಕಿ ಸಾವಿತ್ರಿಯ ದೇವಾಲಯ ಒಡಿಶಾದ ವೈತರಣೀ ನದಿ ಸಮೀಪದಲ್ಲಿದೆ. ಅಲ್ಲಿನ ಮೂಲ ವಿಗ್ರಹ ಹೀಗಿದೆ.

—ಎಸ್.ಎನ್. ಚಂದ್ರಕಲಾ ಕೊಪ್ಪ, ಹುಲ್ಲುಮಕ್ಕಿ



# ಪುರುಷರ ಅಂಗಿಗೆ ಸ್ತ್ರೀಯರ ಡಿಮಾಂಡ್!

ಹುಡುಗಿಯರೂ ಹುಡುಗರ ಮಾದರಿಯ ಅಂಗಿ ಧರಿಸುವುದು ಫ್ಯಾಶನ್! ಆದರೆ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಪುರುಷರ ಹಳೆಯ ಅಂಗಿಯನ್ನು ಧರಿಸುತ್ತಿರುವುದು ಅವರೇ ಕಂಡು ಕೊಂಡ ಅನಿವಾರ್ಯತೆ! ಇದು ಫ್ಯಾಶನ್ ಅಲ್ಲವೇ ಅಲ್ಲ. ಹೊಲ, ತೋಟ, ಗದ್ದೆಗಳಲ್ಲಿ ಕೂಲಿ ಕೆಲಸಕ್ಕೆ ಹೋಗುವ ಮಹಿಳೆಯರು ತಮ್ಮ ಸೀರೆ, ನೈಟಿ ಮೇಲೆ ಪುರುಷರ ತುಂಬುತೋಳಿನ ಅಂಗಿ ಧರಿಸಿ ರಕ್ಷಣೆಯನ್ನು ಪಡೆಯುತ್ತಾರೆ. ಇದರಿಂದ ಹುಲ್ಲು, ಬೆಳೆಯ ಸುಂಕದ ಕಡಿತ ತಪ್ಪಿಸಬಹುದು. ಬಿಸಿಲಿನ ತಾಪದಿಂದ ಕೈಗಳನ್ನು ಕಾಪಾಡಬಹುದು. ನುಸಿ, ಸೊಳ್ಳೆಗಳಿಂದ ರಕ್ಷಣೆ, ತುರಿಕೆ ಗಿಡ ಗಂಟಿಗಳು ಕೈಗೆ ತಾಗದಿರಲೆಂದು ಹಾಗೂ ತಮ್ಮ ಸೀರೆ, ನೈಟಿ ಕೊಳೆಯಾಗದಿರಲೆಂದು ಕಂಡುಕೊಂಡ ಉಪಾಯ ಇದು.

ಇವರೆಲ್ಲಾ ತಮ್ಮ ಮನೆಯಲ್ಲಿ ಲಭ್ಯವಿರುವ ಇಲ್ಲವೇ ತೀರಾ ಪರಿಚಿತರಿಂದ ಹಳೆಯ ಅಂಗಿ ಕೇಳಿ ಪಡೆಯುತ್ತಾರೆ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

# ಟುವ್ವಿ ಹಕ್ಕಿಯ ಮರಿ

ಚಿರತೆ– ಆನೆಗಳು ಕಾಡಿನಲ್ಲಿ ಆಹಾರ ಸಿಗದೇ ನಾಡಿನತ್ತ ಹೆಜ್ಜೆ ಹಾಕಿದ್ದನ್ನು ನೋಡಿದ್ದೇವೆ. ಈಗ ಪಕ್ಷಿಗಳ ಸರದಿ! ಮೊನ್ನೆ ಬೆಳ್ಳಂಬೆಳಿಗ್ಗೆ ನಮ್ಮ ಮನೆಯ ಅಡುಗೆ ಮನೆಗೆ ಪಕ್ಷಿಯ ಮರಿಯೊಂದು ಬಂದು ಕುಳಿತುಕೊಂಡಿತ್ತು. ನೋಡಿದರೆ ಟುವ್ವಿ ಹಕ್ಕಿ. ತಾಯಿಯಿಂದ ಅಗಲಿತ್ತೋ ಏನೋ! ಆಮೇಲೆ ಅದನ್ನು ಹಿತ್ತಲಿನ ಗಿಡವೊಂದರಲ್ಲಿ ಆಕಾಶ ಹುಷಾರಾಗಿ ಕೂರಿಸಿದ.

ಇದು ಮುಸಿಕ್ಯಾಪಿಡೇ ಕುಟುಂಬಕ್ಕೆ ಸೇರಿದ್ದೂ, ವೈಜ್ಞಾನಿಕವಾಗಿ ಪ್ರಿನಿಯಾ ಸೊಸಿಯಾಲಿಸ್ ಎನ್ನುವರು. ಆಂಗ್ಲ ಭಾಷೆಯಲ್ಲಿ ಆಸಿ ಪ್ರಿನಿಯಾ ಎನ್ನುವರು. ಗುಬ್ಬಚ್ಚಿಗಿಂತ ಸಣ್ಣ ಪಕ್ಷಿಯಿದು. ನೆತ್ತಿ, ಕತ್ತಿನ ಹಿಂಭಾಗ, ರೆಕ್ಕೆ, ಬಾಲದ ಮೇಲ್ಭಾಗದಲ್ಲಿ ಬೂದು ಮಿಶ್ರಿತ ಪಾಚಿ ಬಣ್ಣವಿರುತ್ತದೆ. ನೀಳವಾದ ಕಾಲುಗಳು, ಚಿಕ್ಕ ಕಪ್ಪು ಕೊಕ್ಕು ಇರುತ್ತದೆ. ಇದು ಕೈತೋಟ, ಕುರುಚಲು ಕಾಡಿನಲ್ಲಿ ಬಟ್ಟಲಿನಾಕಾರದ ಗೂಡು ಕಟ್ಟುತ್ತದೆ.

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು

